ಫಿನಾನ್ಷಿಯಲ್ ಇಲಾಖಾ.

ತಾರೀಖು 12ನೇ ಜನವರೀ 1876.

ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟು ಟ್ರೈಜರೀಗಳ ಮೇಲೆ 500 ರೂಪಾಯಿಗಳಿಗೆ ಕಡವೆಯಿಲ್ಲದ ಮೊಬಲಗಿಗೆ ಸದರೀ ಡಿಸ್ಟ್ರಿಕ್ಟು ಖಜಾನೇಗಳಲ್ಲಾಗಲಿ, ತಾಲ್ಲೂಕು ಖಜಾನೇಗಳಲ್ಲಾಗಲಿ, ಮೊದಲು ವದಗಿದ ಮೊಬಲಗಿನಿಂದ ಹಣ ಸಲ್ಲತಕ್ಕ ಸೇಕಡಾ 2 ಆಣೆ ವಟ್ಟಕ್ಕೆ ಸಪ್ಲೈ ಬಿಲ್‌ಗಳಿಂಬ ಹುಂಡಿಗಳನ್ನು ಕೊಡಲಿಕ್ಕೆ ಈ ಕೆಳಗೆ ರುಜೂ ಮಾಡಿರುವವರು ತಯಾರಾಗಿರುತ್ತಾರೆ.

ಟಪ್ಪಾಲ್ ರಿಜಿಸ್ಟ್ರೇರ್ಷ ರುಸುಂ.

ತಾರೀಖು 31ನೇ ಜನವರೀ 1876, ಸರ್ಕ್ಯುಲರ್ ನಂ. 1246.

ಡಿಸ್ಟ್ರಿಕ್ಟು ಟ್ರೈಜರೀ ಇಚಾರ್ಜ್ ಆಫಿಸರ್‌ಗಳಿಗೆ—ಡಿಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರು ಕೋರುವದೇನಂದರೆ, ತಮ್ಮ ಟ್ರೈಜರೀ ಲೆಕ್ಕಗಳಲ್ಲಿ ಪೋಸ್ಟ್ ಆಫಿಸ್ ಯೆಂಬ ಹೆಡ್ ಕೆಳಗೆ ಪ್ರತ್ಯೇಕ ಖತಾಯಿತಿ ಮೂಲಕ "ಟಪ್ಪಾಲ್ ರಿಜಿಸ್ಟ್ರೇರ್ಷ ರುಸುಂ" ಮೊಬಲಗನ್ನು ಡಿಸ್ಟ್ರಿಕ್ಟು ಟ್ರೈಜರೀ ಆಫಿಸರ್‌ಗಳು ತೋರಿಸತಕ್ಕದ್ದಲ್ಲದೆ ಟ್ರೈಜರೀ ಲೆಕ್ಕದ ಛಾಪಿಸಲ್ಪಟ್ಟ ನಮೂನೆಯಲ್ಲಿ ನಮೂದಾದ ಬಾಬತು ಅಲ್ಲದ ಇತರ ರಖಂಗಳನ್ನು ಸಹಾ ತೋರಿಸತಕ್ಕದ್ದು.

H. HUDSON,
Dy. Acctt. Genl. in Mysore.

ಫಾರೆಸ್ಟ್ ಇಲಾಖಾ.

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ಹೆಚ್ಚು ಕಡವೆ ಪುಮಾರ್ 24 ಟ್ಯಗಳ ವಜನೀ ಯುಳ್ಳ ಸಂದಲ್ ಯಿದರಡಿ ವಿವರಿಸಲ್ಪಡುವ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

1876ನೇ ಫಿಬ್ರವರೀ 15ನೇ ಮಂಗಳವಾರ ಶಿವಮೊಗ್ಗಾ ಕೋಠೀಯೊಳಗೆ $18\frac{1}{2}$ ಟ್ಯಗಳು. ಬಗರ್ ಅದದ್.
1876ನೇ ಫಿಬ್ರವರೀ 24ನೇ ಮಂಗಳವಾರ ಕವಲೇದುರ್ಗ ಕೋಠೀಯಲ್ಲಿ $5\frac{1}{2}$ ಟ್ಯಗಳು. ಜಕ್ಕೆವ ಬುಕಣಿ.

ಹರಾಜ್ ತಾರೀಖು ಲಾಗಾಯತು ಮೂರುದಿನಗಳೊಳಗಾಗಿ ದರಖಾಸ್ತು ಮೊಬಲಗ ಪೈಕೀ ಶೇಕಡಾ 25 ರೂಪಾಯಿ ಮೇರೆ ಪಾವತೀ ಮಾಡತಕ್ಕದ್ದು. ಬಾಕೀ ಮೊಬಲಗ ಹರಾಜ್ ತಾರೀಖು ಲಾಗಾಯತು 20 ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು.

ತಾರೀಖು 10ನೇ ಜನವರೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ನಗರ ಡಿವೀರ್ಜ ಬಾಬತು ಈ ಕೆಳಗೆ ಬರುವ ತೇಗದ ವ ಇತರ ಮರಗಳ ದಿಮ್ಮೀಗಳು ಯಿದರಡಿ ತಿಳಿಸಲ್ಪಟ್ಟ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಡಿಪೋ ಹೆಸರು	ಹರಾಜ್ ತಾರೀಖು	ತೇಗದ ಮರ	ಬೀಟೇಮರ	ಜಂಗ್ಲೀಮರ	ತೇಗದ ಕೂಚಗಳು	ಜಂಗ್ಲೀ ಮರದ ಕೂಚಗಳು	ಜುಮ್ಲಾ.
ಶಿಕಾರಿಪುರ ತಾಲ್ಲೂಕಿನಲ್ಲಿರುವ ಶಿಕಾರಿಪುರದ ಡಿಪೋ	15ನೇ ಮಾರ್ಚೀ 1876.	959	633	408	265	57	2,322
ಶಿಕಾರಿಪುರ ತಾಲ್ಲೂಕಿನಲ್ಲಿರುವ ಶಿರಾಳ ಕೊಪ್ಪದ ಡಿಪೋ	25ನೇ ಮಾರ್ಚೀ 1876.	129	162	574	37	43	945
ಜುಮ್ಲಾ.		1,088	795	982	302	100	3,267